

ನಬಿಲನ ಪೂರ್ವ ಮತ್ತು ವರ್ತಮಾನಗಳು ಹಲವಾರಿದ್ದವು. ಅವುಗಳನ್ನು ಹೊಂದಿಸಿ ಜೋಡಿಸಿ ನೋಡಲು ಹೋದಾಗೆಲ್ಲ ಅವನಿಗೇ ಗಲಿಬಿಲಿಯಾಗುವಷ್ಟು ವೈರುಧ್ಯಗಳು ಅವನ ಬದುಕಲ್ಲೀಗ ತುಂಬಿದ್ದವು. ಯಾವುದಕ್ಕೂ ತಾಳೆಯೇ ಇರಲಿಲ್ಲ. ಯಾವುದೋ ಬೀಜವಾಗಿ ಬಿತ್ತಲ್ಪಟ್ಟಿದ್ದವನು, ಇನ್ಯಾವುದೋ ಕಳೆಯಾಗಿಹೋಗಿದ್ದ. ಆಂತರಿಕ ಯುದ್ಧದ ಕಾರಣ ಅವನ ಬದುಕು ಅಸ್ತವ್ಯಸ್ತವಾಗಿತ್ತು. ನಡುವೆ ಹಲವು ಕೊಂಡಿಗಳು ಕಳಚಿಹೋಗಿದ್ದವು. ಈಗ ಅವನು ಯಾರಂತೆಯೂ ಇರಲಿಲ್ಲ. ಅವನಂತೆಯೂ ಉಳಿದಿರಲಿಲ್ಲ. ಮೂಲವನ್ನು ಮರೆಯದೆ ಅದಕ್ಕೆ ಮರಳಲು ಅವನ ದೇಶವೂ ಅವನ ಪಾಲಿಗೆ ಉಳಿದಿರಲಿಲ್ಲ.

ಜಾಧವನ ಸಹಾಯಹಸ್ತವನ್ನು ತಿರಸ್ಕರಿಸುತ್ತ ನಬಿಲ್ ತನ್ನ ಪ್ರಶ್ನೆಯನ್ನು ಮತ್ತೆ ನೆನಪಿಸಿದ.

"ಹಾಗಾದರೆ ಹೇಳು... ನನ್ನ ಫೋನ್ ನಂಬರನ್ನು ಮಿಲಿಟರಿಯವರಿಗೆ ಯಾಕೆ ಕೊಟ್ಟೆ? ದುಡ್ಡಿಗಾ? ಹೆಂಡಕ್ಕಾ, ಹೆಣ್ಣಿಗಾ ಅಥವಾ ನನ್ನ ಮೇಲೆ ನಿನಗಿದ್ದದ್ದು ಯಾವ ಹಗೆ?' ನಿನ್ನ ಪರಿಚಯದ ನನ್ನ ಚಿಕ್ಕಪ್ಪನನ್ನು ಥಳಿಸಿ, ತಲೆ ಕೆಳಗಾಗಿ ಎರಡು ದಿನ ನೇತು ಹಾಕಿದ್ದರು. ಗುಟುಕು ಜೀವ ಹಿಡಿದು ಪ್ರಜ್ಞೆತಪ್ಪಿದ್ದ ಅವರ ದೇಹದ ಮೇಲೆ ಬೇರೊಬ್ಬನನ್ನು ನಡೆಯಲು ಹೇಳಿದರು. ನನ್ನ ಕಣ್ಣೆದುರೇ ಅವರ ಜೀವ ಹಾರಿಹೋಯ್ತು. ನಿನಗೆ ಒಳ್ಳೇ ಸ್ನೇಹಿತನಾಗಿದ್ದ ನನ್ನ ಕಸಿನ್ ಅವರ ಹಿಂಸೆ ತಾಳಲಾರದೆ ಹುಚ್ಚನಾದ. ನನ್ನ ಮನೆಯವರು, ಸಂಬಂಧಿಕರು ಎಲ್ಲರನ್ನೂ ಹಿಡಿದು ಕೊಂದರು ಆ ಪರಮ ದ್ರೋಹಿಗಳು.... ಇದೆಲ್ಲ ಆಗಿದ್ದು ನಿನ್ನಿಂದ. ನೀನು ನನ್ನ ಪ್ರಶ್ನೆಗಳಿಗೆ ಉತ್ತರ ಹೇಳುವಾಗ ನಿನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು ಅಂತಲೇ ಈ ಭೇಟಿಗೆ ನಿನ್ನನ್ನ ಕರೆದಿದ್ದು".

ಅಯ್ಯಯ್ಯೋ... ನಬಿಲನ ಇಡೀ ಸಂಸಾರವೇ ನಾಶವಾಗಿಹೋಗಿತ್ತು! ಅವನ ಮನಸ್ಸು ಈಗ ಮಾತು ಬಾರದ ಬೇಗುದಿಗೆ ಬಿದ್ದು ಯೋಚಿಸತೊಡಗಿತು.

ರಾಕ್ಷಸರು ರಾಕ್ಷಸರನ್ನೇ ಸೃಷ್ಟಿಸುತ್ತಾರೆ. ಆದರೆ ನಬಿಲ್‌ನಲ್ಲಿದ್ದ ಮನುಷ್ಯತ್ವವನ್ನು ಪೂರ್ಣ ಕೊಲ್ಲಲು ಸಾಧ್ಯವಾಗಿಲ್ಲ. ನಬಿಲನಲ್ಲಿದ್ದ ನಂಬಿಕೆಯೆನ್ನುವುದು ಸದ್ಯಕ್ಕೆ ಹೊಡೆತ ತಿಂದು ನಲುಗಿತ್ತಾದರೂ, ಅದು ಪೂರ್ಣ ಸತ್ತಿಲ್ಲ. ತನ್ನಿಂದ ಉತ್ತರ ಬಯಸಿ ಬಂದಿದ್ದಾನೆಂದರೆ ಅವನಿನ್ನೂ ನನ್ನ ನೈತಿಕತೆಯಲ್ಲಿ ಪೂರ್ಣ ನಂಬಿಕೆ ಕಳೆದುಕೊಂಡಿಲ್ಲ ಎನ್ನಿಸಿತು. ಆ ಹೊಸ ಉತ್ಸಾಹದಲ್ಲಿ ನಬಿಲ್‌ಗೆ ಸತ್ಯವನ್ನು ಮತ್ತೊಂದು ರೀತಿಯಲ್ಲಿ ಅರ್ಥಮಾಡಿಸಲು ಪ್ರಯತ್ನಪಡುತ್ತ, ಒಂದು ತಾರ್ಕಿಕ ಪ್ರಶ್ನೆಯನ್ನು ಎಸೆದ.

"ನಿನಗೆ ಅಂತಹ ಘೋರ ದ್ರೋಹ ಮಾಡಿದ್ದರೂ ಈ ಭೇಟಿಗೆ ನಾನು ಬರ್ತೀನಿ ಅಂತ ನಿನಗೆ ಅನಿಸಿತ್ತಾ?" ಈಗಲಾದರೂ ಗೆಳೆಯ ತನ್ನ ನಿರ್ಧರಿತ ಮನಸ್ಸನ್ನು ಒಂದಿಷ್ಟಾದರೂ ಸಡಿಲಿಸಬಹುದೆಂಬಂತೆ ಜಾಧವ್ ಕಾದು ಕುಳಿತ.

"ಮೂಳೆ ತುಂಡಿಗೆ ನಾಯಿಗಳು ಬರದೇ ಇರುತ್ತಾ? ನಮ್ಮ ಕಥೆಗಳನ್ನು, ನಮ್ಮ ವಿವರಗಳನ್ನು ಮಾರಿಕೊಂಡು ಉಣ್ಣೋ ನಿನ್ನಂಥವರು, ಇನ್ನೇನಾದರೂ ಕಥೆ ಸಿಗುತ್ತಾ ಅಂತ ಬಂದೇ ಬರ್ತಾರೆ ಅಲ್ವಾ?'' – ತಟಕ್ಕನೆ ಉತ್ತರ ಹೊರಬಿತ್ತು.

"ನಬಿಲ್ ನೀನು ನನ್ನನ್ನು ತಪ್ಪು ತಿಳಿದಿದ್ದೀಯ. ನಾನು ನಿನ್ನ ವಿವರಗಳನ್ನು ಮಿಲಿಟರಿಯವರಿಗೆ ಕೊಟ್ಟಿಲ್ಲ" ಜಾಧವನ ಮಾತನ್ನು ನಬಿಲ್ ನಡುವೆಯೇ ತುಂಡರಿಸಿ ರೇಗಿದ.

"ನಿನಗೆ ನಿಜ ಹೇಳಲಾಗಲ್ಲ ಜಾಧವ್. ಅದೂ ನನ್ನನ್ನು ನೋಡಿದ ಮೇಲೆ ಭಯವಾಗುತ್ತಿರಬೇಕು. ನಿನ್ನಿಂದ ಬೇವರ್ಸಿಯಾದ ನಾನು, ನನ್ನ ಬರಿ ಕೈಗಳಿಂದಲೇ ನಿನ್ನ ಕತ್ತು ಹಿಸುಕಿ ಈ ಜಗತ್ತಿನಿಂದ ಮುಕ್ತನಾಗಬಲ್ಲೆ. ಆದರೆ ಕೊಲ್ಲಲ್ಲ. ನನ್ನ ಕಡೆ ಮತ್ತೊಮ್ಮೆ ನೋಡು. ನಾಲ್ಕು ವರ್ಷದ ಹಿಂದೆ ನಾನು ಹೇಗಿದ್ದೆ ಯೋಚಿಸು... ನಿನ್ನಲ್ಲಿನ್ನೂ ಆತ್ಮಸಾಕ್ಷಿ ಅಂತೇನಾದರು ಉಳಿದಿದ್ದರೆ, ಇದಕ್ಕೆಲ್ಲ ನೀನೇ ಕಾರಣ ಅಂತ ಅದು ಜೀವನವಿಡೀ ನಿನ್ನನ್ನು ಕುಟುಕಿ ಕೊಲ್ಲಲಿ. ಗೆಟೌಟ್ ಫ್ರಂ ಮೈ ಸೈಟ್..." ಎಂದ ನಬಿಲ್ ಸಂದೇಶ ತಲುಪಿಸಿದ ಆವೇಶದಲ್ಲಿ ಎದ್ದು ಹೊರಟೇ ಹೋದ.

ಗರಬಡಿದಂತೆ ಅಲ್ಲೇ ಕುಳಿತ ಜಾಧವ್ ಯೋಚಿಸತೊಡಗಿದ.

ಅವನು ನಿಜಕ್ಕೂ ನಬಿಲ್‌ನ ನಂಬರನ್ನು ಮಿಲಿಟರಿಗೆ ಕೊಟ್ಟಿರಲಿಲ್ಲ. ಅದನ್ನು ತಿಳಿಸಿ ಹೇಳಲು ನಬಿಲ್ ಅವನಿಗೆ ಅವಕಾಶವನ್ನೇ ನೀಡಿರಲಿಲ್ಲ.

ಅವನು ಅಲೆಪ್ಪೋದಲ್ಲಿದ್ದಂತೆಯೇ ಮಿಲಿಷಿಯ ಗುಂಪಿನವರ ಜೊತೆ ಮಿಲಿಟರಿಯವರ ತಿಕ್ಕಾಟ ಹೆಚ್ಚಾಗಿತ್ತು. ಬಾಂಬು ಗುಂಡುಗಳು ಹಾರಾಡುತ್ತಿದ್ದವು. ವಿದೇಶಗಳು ಈ ಯುದ್ಧದಲ್ಲಿ ಮೂಗು ತೂರಿಸಿದ್ದವು. ಅದನ್ನು ವರದಿ ಮಾಡುತ್ತಿದ್ದ ಜರ್ನಲಿಸ್ಟ್‌ಗಳೂ ನಿಗೂಢವಾಗಿ ಕಣ್ಮರೆಯಾಗುತ್ತಿದ್ದರು. ಆ ಭಯದಲ್ಲಿ ಅವನ ಕಂಪನಿ ಜಾಧವ್‌ನನ್ನು ಹಿಂತಿರುಗಲು ಕರೆದಿತ್ತು. ಯಾರು ಯಾರಿಗೂ ಸಹಾಯ ಮಾಡಲಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು. ಒಮ್ಮೆ ಎಲ್ಲಿಗೋ ವರದಿ ಮಾಡಲೆಂದು ಹೋಗಿದ್ದವನನ್ನು ಇನ್ನೇನು ಹಿಡಿದೇ ಬಿಡುತ್ತಾರೆ ಎನ್ನುವ ಪರಿಸ್ಥಿತಿಯಲ್ಲಿ ಅವನು ಪಲಾಯನ ಮಾಡಬೇಕಾಯ್ತು.

ಅಲ್ಲಿಂದಲೇ ಲಾರಿಯೊಂದನ್ನು ಹತ್ತಿ ಕುಳಿತು, ರಾತ್ರೋ ರಾತ್ರಿ ಜಾಗ ಖಾಲಿಮಾಡಿದ್ದ. ಆಶ್ರಯ ನೀಡಿದ ತನ್ನ ಗೆಳೆಯನಿಗೆ ಹೇಳಿ ಹೋಗುವುದು ಕೂಡ ಸಾಧ್ಯವಿರಲಿಲ್ಲ. ವಿದೇಶಿ ಜರ್ನಲಿಸ್ಟ್‌ಗಳ ಮೇಲೆ ಕೆಂಡ ಕಾರುತ್ತಿದ್ದ ಮಿಲಿಟರಿಯವರ ಕಣ್ಣುತಪ್ಪಿಸಿ, ಒಂದಷ್ಟು ದೂರ ನಡೆದು, ಇನ್ನಷ್ಟು ದೂರ ತೆವಳಿ, ರಹಸ್ಯವಾಗಿ ದೇಶ ಬಿಟ್ಟಿದ್ದ. ಅವನೊಡನೆ ಅವನಂತೆ ತಪ್ಪಿಸಿಕೊಂಡು ಹೋಗುವ ಹಲವರಿದ್ದರು.

ಈ ನುಗ್ಗಾಟದ ಪಲಾಯನದಲ್ಲಿ ಯುದ್ಧ ವಾರ್ತೆಗಳ ವರದಿಗಳಿದ್ದ ಅವನ ಪುಟ್ಟ ಬ್ಯಾಗ್ ಕಳೆದುಹೋಗಿತ್ತು. ಅದರಲ್ಲಿ ಅವನ ಪರಿಚಯ, ಫೋನ್ ಎಲ್ಲವೂ ಇದ್ದವು. ಆದರೆ ಬ್ಯಾಗ್ ಕಳೆದುಕೊಂಡದ್ದು ಅವನಿಗೆ ತಿಳಿಯುವಷ್ಟರಲ್ಲಿ ಅವನು ಟರ್ಕಿಯ ಇಸ್ತಾನ್‌ಬುಲ್‌ಗೆ ಬಂದಾಗಿತ್ತು. ಜೇಬಿನಲ್ಲಿ ಪರ್ಸ್ ಮತ್ತು ಪಾಸ್‌ಪೋರ್ಟ್ ಇದ್ದುದರಿಂದ ಬಚಾವಾಗಿ ಬಂದದ್ದೇ ದೊಡ್ಡ ವಿಚಾರವಾಗಿತ್ತು.

ದಿನೇ ದಿನೇ ಭಯಾನಕವಾಗುತ್ತಿದ್ದ ಯುದ್ಧಭೂಮಿಗೆ ಮತ್ತೆ ಹಿಂತಿರುಗುವುದು ಅವನಿಗೆ ಸಾಧ್ಯವಿರಲಿಲ್ಲ. ಗೆಳೆಯನ ಗೋಪ್ಯ ಫೋನ್ ನಂಬರಿಗೆ ಲಂಡನ್‌ನಿಂದ ಕರೆ ಮಾಡಿದಾಗ ಉತ್ತರವಿರಲಿಲ್ಲ. ನೇರ ಸಂಪರ್ಕಿಸಿದರೆ ಅವನನ್ನು ಅಪಾಯಕ್ಕೆ ತಳ್ಳಿದಂತಾಗುತ್ತಿತ್ತು. ಸಂದೇಶವಾದರೂ ತಲುಪಲಿ ಎಂದು ಬೇರೆ ನಂಬರುಗಳ ಮತ್ತು ಸಂಪರ್ಕಗಳ ಮೂಲಕ ಬಹಳ ಪ್ರಯತ್ನಪಟ್ಟಿದ್ದ. ಎಲ್ಲವೂ ವಿಫಲವಾಗಿತ್ತು. ನಬಿಲ್ ತಾನಾಗಿ ಕರೆ ಮಾಡಬಹುದೇನೋ ಎಂದು ಬಹುಕಾಲ ಕಾದಿದ್ದ.

ಅಂದರೆ, ಆ ವೇಳೆಗಾಗಲೆ ನಬಿಲ್ ಸೆರೆಯಾಗಿದ್ದಿರಬೇಕು? "ನಿನ್ನ ದ್ರೋಹಿ ಗೆಳೆಯನೇ ನಿಮ್ಮ ವಿವರಗಳನ್ನೆಲ್ಲ ಮಾರಿಕೊಂಡಿದ್ದಾನೆ" ಎಂದು ಮಿಲಿಟರಿಯವರು ನಬಿಲ್‌ನನ್ನು ನಂಬಿಸಲು ಪ್ರಯತ್ನಿಸಿರಬೇಕು. ನನ್ನ ಬ್ಯಾಗು, ಫೋನ್ ಮತ್ತಿತರ ವಸ್ತುಗಳನ್ನು ನೋಡಿದ ನಂತರ ನಬಿಲ್ ಹಾಗೆಂದೇ ನಂಬಿದನೇ? ಮಿಲಿಟರಿಯವರು ಅಕಸ್ಮಾತ್ ನನ್ನನ್ನು ಹಿಡಿದು, ನನ್ನ ವಸ್ತುಗಳನ್ನು ಬಲವಂತವಾಗಿ ವಶಪಡಿಸಿಕೊಂಡಿದ್ದಿದ್ದರೆ ನನ್ನನ್ನು ಜೀವಂತ ಬಿಡುತ್ತಿರಲಿಲ್ಲ ಎಂದು ಅವನು ಯೋಚಿಸಿರಬೇಕು. ಮೈಕೂದಲು ಕೂಡ ಸೊರಗದೆ ಸುಖವಾಗಿರುವ ನನ್ನನ್ನು ಇವತ್ತು ನೋಡಿದ ನಂತರ ಆ ಮಿಲಿಟರಿಯವರು ಹೇಳಿದ್ದೇ ಅವನಿಗೆ ನಿಜವೆನಿಸಿರಬೇಕು!

ನಬಿಲ್ ಯಾವಾಗ ಫೋನ್ ಮಾಡಿದ್ದನೋ ಅಥವಾ ಅವನಿಗೆ ಮಿಲಿಟರಿಯವರು ಹೇಗೆ ಫೋನ್ ಮಾಡಿದ್ದರೋ ಒಂದೂ ಅವನಿಗೆ ತಿಳಿದಿರಲಿಲ್ಲ. ನಬಿಲ್‌ಗೆ ಹೀಗಂತ ನಿಜ ಹೇಳಿದ್ದರೂ ಅವನು ನಂಬುತ್ತಿರಲಿಲ್ಲ. ಬ್ಯಾಗ್ ಕಳೆದುಕೊಂಡದ್ದು ತನ್ನದೇ ತಪ್ಪು. ಪರೋಕ್ಷವಾಗಿ ನಾನೇ ಅಪರಾಧಿ. ಆದರೆ ನಾನು ದ್ರೋಹಿ ಮಾತ್ರ ಅಲ್ಲ ಎಂದು ಜಾಧವ್ ಯೋಚಿಸತೊಡಗಿದ.

'ನಾನು ದ್ರೋಹಿಯಲ್ಲ' ಎಂದು ಅವನ ಮನಸ್ಸು ಚೀರುತ್ತಿದ್ದರೂ ಅವನ ಅಪರಾಧಿ ಪ್ರಜ್ಞೆ ಜಾಧವನನ್ನು ಕುಟುಕತೊಡಗಿತು. ಆಂತರಿಕ ಯುದ್ಧದ ಬರ್ಬರ ಅನುಭವ, ನಬಿಲ್‌ನ ಸರಳ, ಸಾಮಾನ್ಯ ಪ್ರಪಂಚವನ್ನು ಧ್ವಂಸಗೊಳಿಸಿತ್ತು. ಗೆಳೆಯನ ಕಣ್ಣಿನಲ್ಲಿ ತಾನು ಕ್ಷಮೆಗೂ ಅರ್ಹನಲ್ಲದ ದ್ರೋಹಿ ಎಂದು ಜಾಧವ್‌ಗೆ ಅರ್ಥವಾಗತೊಡಗಿತು. ಆದರೆ ಜಾಧವ್‌ನಿಂದ ಈಗ ಏನನ್ನೂ ಬದಲಿಸಲು ಸಾಧ್ಯವಿರಲಿಲ್ಲ. ಅಚಾತುರ್ಯವಾಗಿ ಆಗಿಹೋದ ತಪ್ಪಿನಿಂದ ಒಂದು ಕುಟುಂಬವಿಡೀ ನಿರ್ನಾಮವಾಗಿತ್ತು. ನಬಿಲ್ ದೇಶದ್ರೋಹಿ ಎನ್ನುವ ಪಟ್ಟ ಹೊತ್ತಿದ್ದ. ಅದಕ್ಕೆಲ್ಲ ಮೂಲಕಾರಣ ನಬಿಲ್ ಹೇಳುವಂತೆ ತಾನೇ...? ಎಂಬ ಭಾವ ಅವನಲ್ಲಿ ನಿಧಾನಕ್ಕೆ ಬೇರೂರತೊಡಗಿತು.

"ದ್ರೋಹಿಗಳೇ ಅಲ್ಲದ ಗೆಳೆಯರ ಜೊತೆ ಈ ಜೀವನದ್ದೆಂತಹ ದೊಡ್ಡ ದ್ರೋಹ...!'' ಎಂದವನು ಮರುಗತೊಡಗಿದ. ಅವನ ಕಣ್ಣುಗಳಿಂದ ಧಾರಾಕಾರವಾಗಿ ನೀರು ಹರಿಯತೊಡಗಿತು.

**ಪ್ರತಿಕ್ರಿಯಿಸಿ: feedback@sudha.co.in**

